# ಜಿಲ್ಲಾ ಪಂಚಾಯತ ರಾಯಚೂರು.

ಸಂ:ಜಿಪಂರಾ:ಗ್ರಾನೀಸ:ಅಂತರಜಲ:ಆಮಂ:2007-08 ದಿನಾಂಕ: 29-01-2008

## ಆದೇಶ.

**ವಿಷಯ** : 2007-08 ನೇ ಸಾಲಿನ ಅಂತರಜಲ ಯೋಜನೆಗಳಡಿ ಗ್ರಾಮೀಣ ಕುಡಿಯುವ ನೀರಿನ ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

**ಉಲ್ಲೇಖ**: 1) ಜಿಲ್ಲಾ ಪಂಚಾಯತ ರಾಯಚೂರು ಆದೇಶ ಪತ್ರ ಸಂ: ಜಿಪರಾ/ ಅಂತರಜಲ /ಯೋಜನೆ/ 07-08 ದಿನಾಂಕ:28-12-2007.

2)ಕಾರ್ಯ ಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ಇಂಜಿನೀಯರಿಂಗ ವಿಭಾಗ ರಾಯಚೂರು ಅವರ ಪತ್ರ ಸಂ:ಕಾನಿಅ/ಪಂರಾಇಂ/ರಾವಿ/ಕಿ.ಇಂ.-2/2007-08 ದಿನಾಂಕ:23-1-2008

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ 2007-08 ನೇ ಸಾಲಿಗೆ ಅಂತರಜಲ ಯೋಜನೆಗಳಡಿ ಜಿಲ್ಲೆಯ ಗ್ರಾಮೀಣ ಕುಡಿಯುವ ನೀರಿನ ಕ್ರಿಯಾ ಯೋಜನೆಯನ್ನು ಅನುಮೋದಿಸಲಾಗಿದೆ. ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು ಉಲ್ಲೇಖ (2) ರ ಪತ್ರದ ಮೂಲಕ ಕೆಳಕಾಣಿಸಿದ ಕುಡಿಯುವ ನೀರಿನ ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ಆಡಳಿತಾತ್ಮಕ ಮಂಜೂರಾತಿ ಕೋರಿ ಸಲ್ಲಿಸಿರುತ್ತಾರೆ.

ಕಾರ್ಯಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು ಸಲ್ಲಿಸಿದ ಅಂದಾಜು ಪತ್ರಿಕೆಗಳನ್ನು ಪರಿಶೀಲಿಸಲಾಗಿ, ಎಲ್ಲಾ ಕಾಮಗಾರಿಗಳು 2007-08 ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಸೇರಿರುತ್ತವೆ. ಆದ್ದರಿಂದ ಕೆಳಕಾಣಿಸಿದ ಷರತ್ತಿಗೊಳಪಟ್ಟು ಈ ಕೆಳಕಂಡ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ | ಕಾಮಗಾರಿ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಅಂದಾಜು ಮೊತ್ತ (ರೂ.ಲಕ್ಷ ದಲ್ಲಿ) | ಕ್ರಿ.ಯೋ. ಯಲ್ಲಿನ ಪುಟ ಸಂ./ ಕ್ರ.ಸಂ. |
|---|---|---|---|---|
| **ರಾಯಚೂರು ತಾಲ್ಲೂಕು.** | | | | |
| 1 | ಏಗನೂರು ಗ್ರಾಮದಲ್ಲಿ ಕಪಿಲ ದೇವಸ್ಥಾನದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ | ಯಾಪಲದಿನ್ನಿ | 0.88 | 2/9 |
| 2 | ಹಳೆಮಲಿಯಾಬಾದ ಗ್ರಾಮದ ಕುಡಿಯುವ ನೀರಿನ ಭಾವಿಯನ್ನು ಪುನಃಶ್ಚೇತನ ಗೊಳಿಸುವುದು. | ಮಿಟ್ಟಿಮಲ್ಕಾಪುರ | 1.50 | 2/6 |
| 3 | ಇಬ್ರಾಹಿಂದೊಡ್ಡಿ ಗ್ರಾಮದ ಊರಭಾವಿ ಕುಂಟಾ ಹತ್ತಿರ ಗೋಕಟ್ಟೆ ನಿರ್ಮಾಣ | ಸಗಮಕುಂಟಾ | 0.75 | 2/8 |
| 4 | ಕೊರ್ತಕುಂದಾ ಗ್ರಾಮದ ತಿಮ್ಮಪ್ಪ ಗುಡಿ ಹತ್ತಿರ (ಅಗಸರ ಕುಂಟಾ) ಗೋಕಟ್ಟೆ ನಿರ್ಮಾಣ | ಸಗಮಕುಂಟಾ | 0.75 | 2/7 |
| 5 | ವಡ್ಡೆಪಲ್ಲಿ ಗ್ರಾಮದಲ್ಲಿ ಚೆಕ್ ಡ್ಯಾಂ ನಿರ್ಮಾಣ | ಯಾಪಲದಿನ್ನಿ | 1.50 | 2/2 |
| 6 | ಪಲವಲದೊಡ್ಡಿ ಗ್ರಾಮದಲ್ಲಿ ಚೆಕ್ ಡ್ಯಾಂ ನಿರ್ಮಾಣ | ಯಾಪಲದಿನ್ನಿ | 0.88 | 2/12 |
| 7 | ಗೋನಾಳ ಗ್ರಾಮದಲ್ಲಿ ಚೆಕ್ ಡ್ಯಾಂ ನಿರ್ಮಾಣ | ಜಾ.ವೆಂಕಟಾಪುರ | 0.88 | 2/14 |
| 8 | ಬುರ್ದಿಪಾಡ ಗ್ರಾಮದಲ್ಲಿ ಚೆಕ್ ಡ್ಯಾಂ ನಿರ್ಮಾಣ | ಯಾಪಲದಿನ್ನಿ | 1.56 | 2/5 |
| 9 | ಗೋನ್ವಾರ ಗ್ರಾಮದಲ್ಲಿ ಸರ್ವೆ ನಂ. 62/1 ರಲ್ಲಿ ಚೆಕ್ ಡ್ಯಾಂ ನಿರ್ಮಾಣ | ಕಮಲಾಪುರ | 0.88 | 2/10 |
| **ಮಾನವಿ ತಾಲ್ಲೂಕು.** | | | | |
| 1 | ಸಿರವಾರ ಗ್ರಾಮದ ಅಲಸಂದಿ ಗುಡ್ಡ ಹತ್ತಿರ ಚೆಕ್ ಡ್ಯಾಂ ನಿರ್ಮಾಣ. | ಸಿರವಾರ | 1.90 | 3/1 |
| 2 | ಕೆ.ಗುಡದಿನ್ನಿ ಗ್ರಾಮದ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ | ಗುಡದಿನ್ನಿ | 1.88 | 3/3 |
| 3 | ಕಪಗಲ್ ಗ್ರಾಮದ ಸರ್ವೆ ನಮ. 155 ರಲ್ಲಿ ಚೆಕ್ ಡ್ಯಾಂ ನಿರ್ಮಾಣ | ಕಪಗಲ್ | 1.88 | 3/5 |
| 4 | ಹಿರೇಹಣಗಿ ಗ್ರಾಮದಲ್ಲಿ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ | ಹಿರೇಹಣಗಿ | 1.88 | 3/7 |
| 5 | ಸುಂಕನೂರು ಗ್ರಾಮದಲ್ಲಿ ಗೊಕಟ್ಟೆ ನಿರ್ಮಾಣ | ಉಟಕನೂರು. | 5.00 | 3/6 |
| **ದೇವದುರ್ಗ ತಾಲ್ಲೂಕು.** | | | | |
| 1 | ಮಸರಕಲ್ ಗ್ರಾಮದಲ್ಲಿ ಚೆಕ್ ಡ್ಯಾಂ ನಿರ್ಮಾಣ | ಮಸರಕಲ್ | 2.00 | 2/7 |

| | | | | |
|---|---|---|---|---|
| 2 | ಚಿಂತಲಕುಂಟಾ ಗ್ರಾಮದಲ್ಲಿ ಚೆಕ್ ಡ್ಯಾಂ ನಿರ್ಮಾಣ | ಮುಷ್ಟೂರು | 2.00 | 2/2 |
| 3 | ಲಿಂಗದಹಳ್ಳಿ ಗ್ರಾಮದಲ್ಲಿ ಚೆಕ್ ಡ್ಯಾಂ ನಿರ್ಮಾಣ | ಜಾಲಹಳ್ಳಿ | 2.50 | 2/3 |
| 4 | ಹೂವಿನಹಡಗಿ ಗ್ರಾಮದಲ್ಲಿ ಚೆಕ್ ಡ್ಯಾಂ ನಿರ್ಮಾಣ | ದೊಂಡಂಬಳಿ | 2.00 | 2/1 |
| 5 | ವಂದಲಿ ಗ್ರಾಮದಲ್ಲಿ ಚೆಕ್ ಡ್ಯಾಂ ನಿರ್ಮಾಣ | ಪಲಕನಮರಡಿ | 2.50 | 2/6 |
| 6 | ರಾಮದುರ್ಗ ಗ್ರಾಮದಲ್ಲಿ ಚೆಕ್ ಡ್ಯಾಂ ನಿರ್ಮಾಣ | ರಾಮದುರ್ಗ | 2.00 | 2/5 |
| **ಸಿಂಧನೂರು ತಾಲ್ಲೂಕು.** | | | | |
| 1 | ಕುರುಕುಂದಾ ಗ್ರಾಮದಲ್ಲಿ ಗೊಕಟ್ಟೆ ನಿರ್ಮಾಣ | ಕುರುಕುಂದಾ | 2.50 | 2/3 |
| 2 | ಬಾದರ್ಲಿ ಗ್ರಾಮದ ಹತ್ತಿರ ಗೊಕಟ್ಟೆ ನಿರ್ಮಾಣ | ಬಾದರ್ಲಿ | 2.75 | 2/1 |
| **ಲಿಂಗಸೂಗುರು ತಾಲ್ಲೂಕು.** | | | | |
| 1 | ಹೆಗ್ಗಾಪುರ ತಾಂಡಾದ ಹತ್ತಿರ ಪಿಕಪ್ ನಿರ್ಮಾಣ | ಹೆಗ್ಗಾಪುರ ತಾಂಡಾ | 2.00 | 3/4 |

## ಷರತ್ತುಗಳು:

1. ಈ ಯೋಜನೆಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳನ್ನು ಬೇರೆ ಯಾವುದೇ ಯೋಜನೆಯಲ್ಲಿ ತೆಗೆದುಕೊಂಡಿಲ್ಲವೆಂದು ದೃಢೀಕರಿಸುವುದು.
2. ಈ ಎಲ್ಲಾ ಕಾಮಗಾರಿಗಳನ್ನು 2007-08 ನೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಬೇಕು. .ಯಾವುದೇ ಕಾರಣಕ್ಕೂ ಈ ಕಾಮಗಾರಿಗಳು ಮುಂದಿನ ವರ್ಷಕ್ಕೆ ಮುಂದುವರೆದ ಕಾಮಗಾರಿಗಳಾಗದಂತೆ ನೋಡಿಕೊಳ್ಳತಕ್ಕದ್ದು.
3. ಜಿಲ್ಲಾ ಪಂಚಾಯತ ಕಛೇರಿಯಲ್ಲಿ ಕಾಮಗಾರಿಗಳ ಗಣಕೀಕೃತ ಮಾಹಿತಿಯನ್ನು update ಮಾಡಲು ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ ಹಾಗೂ ಪೂರ್ಣಗೊಳಿಸಿದ ದಿನಾಂಕ ಅಥವಾ ಪೂರ್ಣಗೊಳಿಸಬಹುದಾದ ದಿನಾಂಕ ಮತ್ತು ಇತರೆ ಮಾಹಿತಿಯನ್ನು ಈ ಕಾರ್ಯಾಲಯದಿಂದ ನೀಡಿದ ನಮೂನೆಯಲ್ಲಿ ಒದಗಿಸಲು ಸೂಚಿಸಿದೆ. ಹಾಗೂ ಹಿಂದಿನ ಮಾಹೆಯಲ್ಲಿನ ವೆಚ್ಚದ ವಿವಿರಗಳನ್ನು ಪ್ರತಿ ತಿಂಗಳು 5 ನೇ ದಿನಾಂಕದೊಳಗೆ ಈ ಕಛೇರಿಗೆ ಸಲ್ಲಿಸುವುದು.
4. ಕಾಮಗಾರಿಯ ಅನುಷ್ಠಾನ ಮತ್ತು ಆರ್ಥಿಕ ಮತ್ತು ಭೌತಿಕ ಪ್ರಗತಿಯ ಮಾಹಿತಿಯನ್ನು ಸಂಬಂದಿಸಿದ ಗ್ರಾಮ ಪಂಚಾಯಿತಿಗೆ ಒದಗಿಸುವುದು.
5. ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಲಬ್ಯ ಅನುದಾನಕ್ಕೆ ತಕ್ಕಂತೆ ಅನುಷ್ಠಾನಗೊಳಿಸುವುದು ಹಾಗೂ ವೆಚ್ಚವನ್ನು ಸಂಬಂದಿಸಿದ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಭರಿಸುವುದು.

(ಎಸ್.ಅನೀಸ್ ಸಿರಾಜ್)
ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ ರಾಯಚೂರು.

**ಪ್ರತಿಯನ್ನು ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಇವರಿಗೆ ಕಳುಹಿಸಿದೆ.**

1. ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
2. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
3. ಕಾರ್ಯ ಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಇವರಿಗೆ ಆಡಳಿತ ಮಂಜೂರಾತಿ ನೀಡಿದ ಅಂದಾಜು ಪಟ್ಟಿಗಳನ್ನು ಲಗತ್ತಿಸಿ ಕಳುಹಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರು ಪಂಚಾಯತ ರಾಜ್ ಇಂಜಿನೀಯರಿಂಗ ಉಪವಿಭಾಗ ದೇವದುರ್ಗ/ ಮಾನವಿ/ಲಿಂಗಸೂರು/ಸಿಂಧನೂರು./ ರಾಯಚೂರು.
5. ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ ದೇವದುರ್ಗ/ ಮಾನವಿ/ಲಿಂಗಸೂರು/ ಸಿಂಧನೂರು ರಾಯಚೂರು.
6. **ಅಧ್ಯಕ್ಷರು / ಕಾರ್ಯದರ್ಶಿಗಳು**________________ಗ್ರಾಮ ಪಂಚಾಯತ ___________ ತಾಲ್ಲೂಕು ಇವರಿಗೆ ರವಾನಿಸುತ್ತಾ ಕಾಮಗಾರಿಯ ಆಡಳಿತಾತ್ಮಕ ಮಂಜೂರಾತಿಯ ಬಗ್ಗೆ ಗ್ರಾಮ ಪಂಚಾಯತ ಮಾಸಿಕ ಸಭೆಯಲ್ಲಿ ಓದಿ ದೃಢೀಕರಿಸಲು ಸೂಚಿಸಿದೆ.
7. ಜಿಲ್ಲಾ ಪಂಚಾಯತ ರಾಯಚೂರು ಸೂಚನಾ ಫಲಕಕ್ಕೆ.
8. ಕಛೇರಿ ಪ್ರತಿ.